ನೀಡಲು ನಾನು ಇಲ್ಲಿಗೆ ಬಂದೆ. ಆದರೆ ನೀನು ಕೋಪೋದ್ರಿಕ್ತಳಾಗಿರುವೆ...’

‘ದಿನಾಂಕ ನಿಶ್ಚಯವಾಗಿದೆ, ರಾಜರುಗಳು, ಋಷಿಮುನಿ, ಪುರೋಹಿತರುಗಳ ಆಗಮನವಾಗುತ್ತಿದೆ. ವಿವಿಧ ಸಮುದ್ರಗಳ ಪವಿತ್ರ ಜಲವನ್ನು ತರಿಸಿಯಾಗಿದೆ, ಸಮಗ್ರ ಸಾಮಗ್ರಿಗಳ ಜೋಡಣೆಯಾಗಿದೆ. ಇದೆಲ್ಲ ಒಂದೇ ದಿನದಲ್ಲಿ ನಡೆದಿದೆಯೇ? ಎಷ್ಟು ದಿನಗಳಿಂದ ತಯಾರಿ ನಡೆಯುತ್ತಿದೆ. ಆದರೆ ನೀವು ಇಂದು ನನಗೆ ಅರುಹಲು ಬಂದಿರುವಿರಿ. ಇದು ಯಾವ ರೀತಿಯ ವ್ಯವಹಾರ...?’

‘ಪ್ರಿಯೆ, ಕೇಳು...’

‘ನೀವು ಕೇಳಿಸಿಕೊಳ್ಳಿ. ರಾಜ್ಯಾಭಿಷೇಕದ ವಿಷಯವನ್ನು ಅಕ್ಕಂದಿರಾದ ಕೌಸಲ್ಯಾ ಮತ್ತು ಸುಮಿತ್ರಾರವರಿಗೆ ತಿಳಿಸಿಲ್ಲವೇನು? ತಿಳಿಸಿದ್ದೇ ಆಗಿದ್ದರೆ ನನ್ನಲ್ಲಿ ಏಕೆ ಮುಚ್ಚುಮರೆ? ನಾನು ನಿಮ್ಮನ್ನು ಸದಾಕಾಲ ವಿಶೇಷವಾಗಿ ಆದರಿಸುತ್ತಾ ಬಂದಿದ್ದೇನೆ. ಆಡಳಿತ, ರಾಜಕೀಯಕ್ಕೆ ಸಂಬಂಧಿಸಿದಂತೆ ನನ್ನೊಂದಿಗೆ ನೀವು ಸಮಾಲೋಚಿಸಿದಾಗಲೆಲ್ಲ ನಾನು ವಿವೇಕಪೂರ್ಣವಾದ ಸಲಹೆಗಳನ್ನೇ ನೀಡಿದ್ದೇನೆ. ನಾನೆಂದೂ ನನ್ನ ಪ್ರತ್ಯೇಕ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಬದಲಾಗಿ ನಿಮ್ಮ ಆಂತರಿಕ ಒತ್ತಡ, ತೀವ್ರತೆಯನ್ನು ಶಮನಗೊಳಿಸುವ ಪ್ರಯತ್ನ ಮಾಡಿದ್ದೇನೆ. ಈಗ ಅಭಿಷೇಕದ ವಿಷಯವನ್ನು ನನ್ನಿಂದ ಮುಚ್ಚಿಡಲಾಗಿದೆ. ತಿಳಿಸಿದ್ದೇ ಆಗಿದ್ದಲ್ಲಿ ನಾನೇನು ವಿಘ್ನ ತಂದೊಡ್ಡುತ್ತಿದ್ದೆ?’

‘ಅದೆಂತಹ ವಿಘ್ನ? ಜೇಷ್ಠಪುತ್ರ ರಾಜ್ಯದ ಉತ್ತರಾಧಿಕಾರಿಯಾಗುತ್ತಾನೆ. ಇದು ಶಾಸ್ತ್ರ ಸಮ್ಮತವಾದ ವಿಷಯ...’

‘ತಿಳಿದಿದೆ. ರಾಮನೇ ಉತ್ತರಾಧಿಕಾರಿಯಾಗಬೇಕು ಎಂಬುದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ ಈ ಪ್ರಕರಣವನ್ನು ನನ್ನಿಂದ ಮುಚ್ಚಿಡಲಾಗಿದೆ. ಇದು ನನಗೆ ಸಹಿಸಲಾರದ ವಿಷಯವಾಗಿದೆ...’

‘ನನ್ನಿಂದ ತಪ್ಪಾಗಿದೆ. ನಿನ್ನೆದುರು ನಾನು ಅಪರಾಧಿ. ಕ್ಷಮೆ ಯಾಚಿಸುತ್ತೇನೆ. ಇದು ಶುಭ ಮುಹೂರ್ತದ ವೇಳೆ. ಕ್ರೋಧವನ್ನು ತ್ಯಜಿಸಿ ಸಮಾರಂಭದಲ್ಲಿ ಭಾಗವಹಿಸು. ನಿನ್ನ ಸಹಭಾಗಿತ್ವ ನೀಡು...’

‘ನೀಡುತ್ತಿದ್ದೆ... ನೀವು ಕಪಟಿಯಾಗಿಲ್ಲದಿರುತ್ತಿದ್ದರೆ. ನೀವು ನನಗಷ್ಟೇ ಅಲ್ಲ. ನನ್ನ ಪಿತಾಶ್ರೀ ಜೊತೆಗೂ ಕಪಟವಾಡಿದ್ದೀರಿ. ಅವರಿಗೂ ನೀವು ಆಮಂತ್ರಣ ನೀಡಿಲ್ಲ. ಒಂದು ವೇಳೆ ಆಮಂತ್ರಣ ನೀಡಿದ್ದಿದ್ದರೆ ಅವರು ಆಗಮಿಸಿ ನಿಮ್ಮ ವಚನಬದ್ಧತೆಯನ್ನು ನೆನಪಿಸುತ್ತಿದ್ದರು. ಅದಕ್ಕೆ...’

ದಶರಥ ಅನ್ವೇಷಣಾತ್ಮಕ ದೃಷ್ಟಿಯಿಂದ ಕೈಕೆಯಿಯನ್ನು ನೋಡಿದ. ಅಂದರೆ ಈ ಕಡೆಗೆ ವಚನಬದ್ಧತೆಯ ನೆನಪು ಇನ್ನೂ ಇದೆ. ದಶರಥ ಅಶ್ವಪತಿಯ ಬಳಿ ಕೈಕೆಯಿಯನ್ನು ವಿವಾಹ ಮಾಡಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದ್ದ. ಆತ ವಿವಾಹಿತನಾಗಿದ್ದ. ಹಾಗಾಗಿ ಅಶ್ವಪತಿ ಗೊಂದಲದಲ್ಲಿದ್ದರು. ಆದರೆ ಸಾಮ್ರಾಟರ ಪ್ರಸ್ತಾಪವನ್ನು ತಿರಸ್ಕರಿಸುವುದು ಅವರಿಗೆ ಸಮಂಜಸವೆನಿಸಲಿಲ್ಲ. ಆಗ ಕೈಕೆಯಿಗೆ ಜನಿಸಿದ ಮಗನನ್ನೇ ಉತ್ತರಾಧಿಕಾರಿಯಾಗಿ ಮಾಡಬೇಕೆಂಬ ಷರತ್ತನ್ನು ಮುಂದಿಟ್ಟಿದ್ದರು. ದಶರಥನಿಗೆ ಮಕ್ಕಳಿರದಿದ್ದ ಕಾರಣ ಆತ ಕೂಡಲೇ ವಚನ ನೀಡಿದ್ದ. ಕೌಸಲ್ಯಾ ಮತ್ತು ಸುಮಿತ್ರಾರನ್ನು ದಶರಥ ಬಂಜೆಯರು ಎಂದು ತಿಳಿದಿದ್ದ. ಆದರೆ ಕೈಕೆಯಿ ಕೂಡ ಸಂತಾನವತಿ ಆಗಲಿಲ್ಲ. ಆಗ ಚಿಂತಿತನಾದ ಆತ ಶ್ರವಣಕುಮಾರನ ತಂದೆಯು ನೀಡಿದ ಶ್ರಾಪದ ಪ್ರಸಂಗವನ್ನು ಹೇಳಿದ್ದ.

‘... ಪುತ್ರನೇ ಇಲ್ಲ. ನನ್ನ ಸಾವು ಪುತ್ರ ವಿಯೋಗದಿಂದ ಹೇಗೆ ಸಾಧ್ಯ?’

ಕೈಕೆಯಿ ಆತನ ಮನೋಬಲವನ್ನು ಹೆಚ್ಚಿಸಿದಳು. ನೀವು ಶಾಪದ ನಕಾರಾತ್ಮಕ ಭಾಗವನ್ನಷ್ಟೇ ನೋಡುತ್ತಿರುವಿರಿ. ಸಕಾರಾತ್ಮಕ ಭಾಗವೂ ಇದೆ. ಅದೇನೆಂದರೆ ಪುತ್ರವಿಯೋಗವಂತೂ ನಿಶ್ಚಿತವಾಗಿದೆ. ನೀವು ತಂದೆಯಾಗುತ್ತೀರಿ. ಮೊದಲು ಪುತ್ರಪ್ರಾಪ್ತಿ. ನಂತರ ವಿಯೋಗ...’ ಕೈಕೆಯಿ ಹೇಳಿದ ಮಾತು ಸತ್ಯವೇ ಆಯಿತು. ಒಂದಲ್ಲ, ನಾಲ್ಕು ಜನ ಪುತ್ರರು ಜನಿಸಿದರು.

‘ಕೈಕೆಯಿಯ ನರೇಶ ಈಗ ಅನಾರೋಗ್ಯ ಪೀಡಿತರಾಗಿದ್ದಾರೆ. ಆದ್ದರಿಂದ ಅವರಿಗೆ ಆಮಂತ್ರಣ ಕಳುಹಿಸುವುದು ಸಮಂಜಸವೆನಿಸಲಿಲ್ಲ. ಅವರಿಗೆ ಇಲ್ಲಿಗೆ ಆಗಮಿಸಲು ಆಗುತ್ತಿರಲಿಲ್ಲ. ಹಾಗಾಗಿಯೇ ಭರತನನ್ನು ನೋಡಬೇಕೆಂಬ ಇಚ್ಛೆಯಿಂದ ಆತನನ್ನು ತನ್ನ ಬಳಿಗೆ ಕರೆಸಿಕೊಂಡಿದ್ದಾರೆ. ಭರತನ ಸಂಗಡ ಶತ್ರುಘ್ನನೂ ಹೋಗಿದ್ದಾನೆ.’

‘ಭರತನನ್ನು ನನ್ನ ತಾಯಿಯ ಮನೆಗೆ ಕಳುಹಿಸಲು ತಾವೊಂದು ಸಂದರ್ಭವನ್ನು ರೂಪಿಸಿಕೊಂಡಿರಿ. ಇಷ್ಟೊಂದು ದೊಡ್ಡ ಸಮಾರಂಭ ನಡೆಯುತ್ತಿರುವಾಗ ಅವನನ್ನು ಕರೆಸಿಕೊಳ್ಳಬೇಕೆಂಬ ಅವಶ್ಯಕತೆ ನಿಮಗೆ ಹೊಳೆಯಲಿಲ್ಲ. ನಾಲ್ಕು ಜನ ಸಹೋದರರು ಒಟ್ಟಿಗೆ ಜನಿಸಿದರು, ಒಟ್ಟಿಗೆ ಗುರುಕುಲಕ್ಕೆ ತೆರಳಿದರು ಮತ್ತು ಒಟ್ಟಿಗೆ ಅವರ ಲಾಲನೆ ಪಾಲನೆ ನಡೆಯಿತು. ಅವರೆಲ್ಲರ ಹುಟ್ಟುಹಬ್ಬವನ್ನು ಒಟ್ಟಿಗೆ ಆಚರಿಸಲಾಯಿತು. ರಾಜ್ಯಾಭಿಷೇಕದ ಹೊತ್ತಿನಲ್ಲಿ ನನ್ನನ್ನು ಕರೆಸಿಕೊಳ್ಳಲಿಲ್ಲ ಎಂದು ಭರತನಿಗೆ ತಿಳಿದರೆ ಆತನಿಗೆ ಅತೀವ ವೇದನೆಯಾಗುತ್ತದೆ. ಆದರೆ ನಿಮಗೆ ಅದರ ಅರಿವು ಇಲ್ಲ.’



‘ಪ್ರಮಾದವಾಗಿದೆ. ಭರತನನ್ನು ತಕ್ಷಣ ಕರೆಸಿಕೊಳ್ಳುತ್ತೇನೆ...’

‘ಏನು? ಆಕಾಶಬುಟ್ಟಿಯ ಮೂಲಕ ಅವನನ್ನು ಕರೆಸಿಕೊಳ್ಳುತ್ತೀರೇನು? ಅದೇನು ಕ್ಷಣಮಾತ್ರದಲ್ಲಿ ಭರತನನ್ನು ಅಲ್ಲಿಂದ ಅಯೋಧ್ಯೆಗೆ ತಲುಪಿಸಿ ಬಿಡುತ್ತದೆಯೇನು? ಸರಿ, ನಿಮ್ಮಿಂದ ಪ್ರಮಾದವಾಗಿ ಹೋಗಿದೆ. ಆದರೆ ರಾಮನಾದರೂ ಭರತ ಮತ್ತು ಶತ್ರುಘ್ನರನ್ನು ಕರೆಸಿಕೊಳ್ಳಿ ಎಂದು ಒಮ್ಮೆಯಾದರೂ ಹೇಳಿರುವನೇ?’

‘ರಾಣಿ, ರಾಮನ ವಿರುದ್ಧ ಏನನ್ನೂ ಆಡದಿರು. ಆತ ನನ್ನ ಪ್ರಾಣಕ್ಕಿಂತಲೂ ಪ್ರಿಯನಾದ ಪುತ್ರ.’

‘ರಾಮನೇ? ಏಕೆ? ಉಳಿದವರು ಏಕಾಗಬಾರದು? ಭರತ ನಿಮ್ಮ ಮಗನಲ್ಲವೇನು? ಪ್ರಜಾಪಾಲನೆಯಲ್ಲಿ ರಾಮನಷ್ಟೇ ಆತನೂ ಜನಪ್ರಿಯನಾಗಿದ್ದಾನೆ. ರೂಪ, ಶೀಲ, ಶಕ್ತಿ, ಪರಾಕ್ರಮ, ಶಸ್ತ್ರಚಾಲನೆಯಲ್ಲಿ ರಾಮನಷ್ಟೇ ಸಮಬಲನಾಗಿದ್ದಾನೆ. ಆತನ ಬಹು ಆಯಾಮಿ ವ್ಯಕ್ತಿತ್ವದಿಂದ ನೀವು ಭಯಭೀತರಾಗುತ್ತಿದ್ದೀರಿ ಎಂದು ನನಗನಿಸುತ್ತದೆ. ರಾಮನಿಗೆ ಸರಿಸಮಾನಾಗಿ ಆತ ನಿಲ್ಲಬಾರದೆಂಬುದು ನಿಮ್ಮ ಅನಿಸಿಕೆ.’

‘ಅಂತಹ ವಿಚಾರವೇನೂ ಇಲ್ಲ.’

‘ಇದೇ ವಿಚಾರ ರಾಜನ್, ಸತ್ಯ ಯಾವಾಗಲೂ ಅಪಥ್ಯವಾಗಿರುತ್ತದೆ. ಭರತನನ್ನು ಕರೆಸಿಕೊಳ್ಳದಿರುವುದು, ಶೀಘ್ರಾತಿಶೀಘ್ರ ರಾಮನಿಗೆ ಪಟ್ಟಾಭಿಷೇಕ ಮಾಡಿಸುವುದು, ನನ್ನಿಂದ ಈ ಎಲ್ಲಾ ವಿಷಯವನ್ನು ಗುಪ್ತವಾಗಿಡುವುದು... ಇದೆಲ್ಲ ಅಕ್ಕ ಕೌಸಲ್ಯಾ, ರಾಮ ಮತ್ತು ನಿಮ್ಮ ಪೂರ್ವನಿರ್ಧರಿತ ಕುತಂತ್ರವಾಗಿದೆ...’

‘ಕೌಸಲ್ಯಾಳನ್ನು ದೂಷಿಸಬೇಡ. ಆಕೆ ದಯಾವತಿ...’

‘ಅವರು ನನ್ನ ತಂದೆಯ ಮನೆಯ ವೈಭವ ಮತ್ತು ನನ್ನ ವ್ಯಕ್ತಿತ್ವದ ಹಿರಿಮೆಯಿಂದ ಕೀಳರಿಮೆ ಅನುಭವಿಸುತ್ತಿದ್ದಾರೆ. ನೀವು ನನ್ನನ್ನು ವಿಶೇಷವಾಗಿ ಆದರಿಸುತ್ತಿರುವುದನ್ನು ಅವರು ದ್ವೇಷಿಸುತ್ತಾರೆ. ರಾಮನ ರಾಜ್ಯಾಭಿಷೇಕವಾಗಿ ಹೋದರೆ ಅವರ ಅಧಿಕಾರ ಹೆಚ್ಚುತ್ತದೆ ಮತ್ತು ಅಧಿಕಾರದ ಕ್ಷೇತ್ರ ವಿಸ್ತಾರಗೊಳ್ಳುತ್ತದೆ. ಆದುದರಿಂದಲೇ ಅವರು ನನ್ನ ಅವಗಣನೆಗೆ ಕಾರಣ ಹುಡುಕುತ್ತಿದ್ದಾರೆ. ನನ್ನನ್ನು ಅಸಹಾಯಕಳನ್ನಾಗಿ ಮಾಡಲು ನಾನಾ ಉಪಾಯಗಳನ್ನು ಮಾಡುತ್ತಾರೆ.’

‘ಆಧಾರರಹಿತ ಮಾತುಗಳನ್ನಾಡಬೇಡ. ಅಂತಹ ಪರಿಸ್ಥಿತಿ ಉದ್ಭವವಾಗಲು ರಾಮ ಬಿಡುವುದಿಲ್ಲ. ಕೌಸಲ್ಯಾಳಿಗೆ ಸಮನಾಗಿ ನಿನ್ನನ್ನೂ ಆತ ಗೌರವಿಸುತ್ತಾನೆ.’

‘ನಾನು ಕೂಡ ರಾಮನಿಗೆ ಆದ್ಯತೆ ನೀಡಿದ್ದೇನೆ. ನಿತ್ಯವೂ ಆತ ನನ್ನ ಬಳಿ ಬರುತ್ತಿದ್ದ. ಆದರೆ ಒಂದು